**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 37/2024**

**ಚಾ.ಸಾ. :-1**
**ಪ್ರಾ.ಸಾ. :-1**

| | |
|---|---|
| ಹೆಸರು | : ರವಿಕುಮಾರ್ |
| ತಂದೆಯ ಹೆಸರು | : ಲೇಟ್ ಕೃಷ್ಣೇಗೌಡ |
| ವಯಸ್ಸು | : 45 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸಸ್ಥಳ | : ಪಾಲಹಳ್ಳಿ ಗ್ರಾಮ |

**ಪ್ರಮಾಣೀಕರಿಸಲಾದ ದಿನಾಂಕಃ- 02.03.2026**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ಚಾ.ಸಾ-2 ಮತ್ತು 3 ಪರಿಚಯ. ಮೃತ ಪುಟ್ಟಸ್ವಾಮಿರವರು ನನ್ನ ಚಿಕ್ಕಪ್ಪ. ದಿನಾಂಕಃ 19.05.2024 ರಂದು ನಾನು ಪಾಲಹಳ್ಳಿಯ ಬಸ್ ನಿಲ್ದಾಣದ ಬಳಿ ಇರುವ ಅರಳಿ ಮರದ ಬಳಿ ಚಾ.ಸಾ-2 ಹಾಗೂ 3 ರವರ ಜೊತೆ ನಿಂತಿದ್ದೆ. ಆಗ ಸಮಯ ಸುಮಾರು ರಾತ್ರಿ 9.30 ಆಗಿತ್ತು. ಆಗ ಮೈಸೂರು ಕಡೆಯಿಂದ KSRTC Bus ಬಂದಿದ್ದು, ಆ ಸಮಯದಲ್ಲಿ ಪ್ರಯಾಣಿಕರು ಬಸ್ಸಿನಿಂದ ಇಳಿಯುತ್ತಿದ್ದರು, ಆಗ ಬಸ್ ಮುಂದೆ ಹೊರಟಿರುತ್ತದೆ. ಆ ಸಮಯದಲ್ಲಿ ನನ್ನ ಚಿಕ್ಕಪ್ಪನ ಕಾಲಿನ ಮೇಲೆ ಹಿಂಬದಿಯ ಚಕ್ರ ಹರಿದು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ.

ಸದರಿ ಬಸ್ ಪ್ರಯಾಣಿಕರನ್ನು ಇಳಿಸಲು ಸ್ವಲ್ಪ ಹೊತ್ತು ನಿಲ್ಲಿಸಿದ್ದು, ನಂತರ ಪ್ರಯಾಣಿಕರು ಇಳಿಯುತ್ತಿದ್ದರೂ ಸಹ ಬಸ್ ಮುಂದೆ ಹೊರಟಿರುತ್ತದೆ, ಆ ಕಾರಣದಿಂದ ಅಪಘಾತವಾಗಿರುತ್ತದೆ.

ಅಪಘಾತದ ಬಗ್ಗೆ ಪೊಲೀಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿಯ ಸಹಿ ಇರುವ ಒಂದು ದಾಖಲೆಯು ದೂರಾಗಿದ್ದು ಅದನ್ನು ಈಗ ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರ್ತಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :</u>**

ಬಸ್ ನಿಲ್ದಾಣಕ್ಕೆ ಮುಂಚೆ ಸುಮಾರು 30 ಅಡಿ ದೂರದಲ್ಲಿ ಒಂದು ರಸ್ತೆ ಉಬ್ಬು ಇರುತ್ತದೆ ಎಂದರೆ ಸರಿ. ಸದರಿ ಬಸ್ಸಿನಲ್ಲಿ ಆ ದಿನ ಸೀಟುಗಳು ಖಾಲಿ ಇದ್ದವು. ಸದರಿ ಬಸ್ಸಿಗೆ ಸ್ವಯಂ ಚಾಲಿತ ಬಾಗಿಲು ಇತ್ತೇ ಅಥವಾ ಕೈಯಿಂದ ಹಾಕುವ ಬಾಗಿಲು ಇತ್ತೇ ಎಂದರೆ ಸಾಕ್ಷಿ ಸದರಿ ಬಸ್ಸಿಗೆ ಯಾವುದೇ ಬಾಗಿಲುಗಳು ಇರಲಿಲ್ಲ, ಸಂಪೂರ್ಣವಾಗಿ ತೆರೆದಿತ್ತು ಎನ್ನುತ್ತಾರೆ. ಪಾಲಹಳ್ಳಿ ಬಸ್ ನಿಲ್ದಾಣದಲ್ಲಿ ಎಷ್ಟು ಜನ ಪ್ರಯಾಣಿಕರು ಇಳಿದಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ಬಸ್ಸಿನಲ್ಲಿ ನಿರ್ವಾಹಕರು ಇದ್ದರು. ಬಸ್ಸಿನ ಹಿಂಭಾಗದ ಎಡಭಾಗದ ಚಕ್ರ ನನ್ನ ಚಿಕ್ಕಪ್ಪನ ಕಾಲಿನ ಮೇಲೆ ಹರಿದಿರುತ್ತದೆ. ನನ್ನ ಚಿಕ್ಕಪ್ಪನವರು ಚಲಿಸುತ್ತಿದ್ದ ಬಸ್ಸಿನಿಂದ ಅವರ ಮನೆಯ ಸಮೀಪ ಇಳಿದುಕೊಳ್ಳಲು ಪ್ರಯತ್ನಿಸಿದ್ದರಿಂದ ಅವರ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

**2.** ಬಸ್ಸಿನ ನಿರ್ವಾಹಕನ ಸೂಚನೆ ಮೇರೆಗೆ ಆರೋಪಿ ಬಸ್ಸನ್ನು ನಿಲ್ಲಿಸುತ್ತಿದ್ದರು ಹಾಗೂ ಚಾಲನೆ ಮಾಡುತ್ತಿದ್ದರು ಎಂದರೆ ಸರಿ. ನನ್ನ ಚಿಕ್ಕಪ್ಪ ಆ ದಿನ ಮದ್ಯಪಾನ ಸೇವನೆ ಮಾಡಿದ್ದು, ಅವರು ನಿಯಂತ್ರಣ ತಪ್ಪಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ :</u> ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**